ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com
ಇಮೇಲ್ ಐಡಿ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009
ದಿನಾಂಕ: 25 OCT 2021

**ವಿಷಯ:** ಮಾದರಿ ಪರೀಕ್ಷಾ ಪ್ರಮಾಣ ಪತ್ರದ (Type Test Certificate) ಮಾನ್ಯತೆಯನ್ನು ದಿನಾಂಕ 30.09.2022 ರವರೆಗೆ ವಿಸ್ತರಿಸುವ ಬಗ್ಗೆ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (ಸಿಇಎ) ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ಮತ್ತು ಕೋವಿಡ್-19 ಸಾಂಕ್ರಾಮಿಕದಿಂದಾಗಿ ಎದುರಿಸುತ್ತಿರುವ ತೊಂದರೆಗಳ ದೃಷ್ಟಿಯಿಂದ ದಿನಾಂಕ 11.05.2020 ರ (CEA) ಮಾರ್ಗಸೂಚಿಯ ಪ್ಯಾರ 2(ಜಿ) ಗೆ ತಿದ್ದುಪಡಿಯ ಕುರಿತಂತೆ.

**ಉಲ್ಲೇಖ:**

1. ಪತ್ರ ಸಂಖ್ಯೆ:ಸಿಇಎ-ಪಿಎಸ್-80/1/2019-ಪಿಎಸ್ಇಟಿಡಿ ವಿಭಾಗ/195-271 ದಿನಾಂಕ 11.05.2020 - ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿ ಪ್ರಮುಖ ವಿದ್ಯುತ್ ಉಪಕರಣಗಳಲ್ಲಿ ನಡೆಸಲಾದ ಮಾದರಿ ಪರೀಕ್ಷೆಗಳ ಮಾನ್ಯತೆಯ ಅವಧಿಯ ಮಾರ್ಗಸೂಚಿಗಳು.
2. ಕೇಂದ್ರೀಯ ವಿದ್ಯುಚ್ಛಕ್ತಿ ಪಾಧಿಕಾರದ ಪತ್ರ ಸಂಖ್ಯೆ: ಸಿಇಎ-ಪಿಎಸ್-80/1/2019-ಪಿಎಸ್ಇಟಿಡಿ ಭಾಗ(2)/564-640 ದಿನಾಂಕ 16.10.2020.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ19/345/85-86 ದಿನಾಂಕ 02.01.2021.
4. ಕೇಂದ್ರೀಯ ವಿದ್ಯುಚ್ಛಕ್ತಿ ಪಾಧಿಕಾರದ ಪತ್ರ ಸಂಖ್ಯೆ: ಸಿಇಎ-ಪಿಎಸ್-14-80/01/2019-ಪಿಎಸ್ಇಟಿಡಿ ಭಾಗ(2)/517-96 ದಿನಾಂಕ 17.09.2021.
5. ಮುಖ್ಯ ಇಂಜಿನಿಯರ್ (ಟಿ ಮತ್ತು ಪಿ), ಕವಿಪ್ರನಿನಿ ರವರ ಟಿಪ್ಪಣಿ ದಿನಾಂಕ 05.10.2021.
6. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿರವರಿಂದ ಅನುಮೋದನೆಗೊಂಡ ಈ ಕಛೇರಿ ಸಮ ಸಂಖ್ಯೆಯ ಟಿಪ್ಪಣಿ ದಿನಾಂಕ: 22.10.2021.

*******

**ಮುನ್ನುಡಿ:**

ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ ((ಸಿಇಎ) ದಿನಾಂಕ 11.05.2020ರ ಪತ್ರದಲ್ಲಿ ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿ ಪ್ರಮುಖ ವಿದ್ಯುತ್ ಉಪಕರಣಗಳಲ್ಲಿ ನಡೆಸಲಾದ ಮಾದರಿ ಪರೀಕ್ಷೆಗಳ ಮಾನ್ಯತೆಯ

ಅವಧಿಯ ಕುರಿತಾಗಿ ಮಾರ್ಗಸೂಚಿಗಳನ್ನು ರೂಪಿಸಿದೆ. ದಿನಾಂಕ 18.06.2020 ರಂದು ನಿರ್ದೇಶಕರು (ಪ್ರಸರಣ) ಕವಿಪ್ರನಿನಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ CEA ಹೊರಡಿಸಿದ ಮಾರ್ಗಸೂಚಿಗಳನ್ನು ವಿವಿಧ ವಿದ್ಯುತ್ ಉಪಕರಣಗಳ ಕವಿಪ್ರನಿನಿಯ ತಾಂತ್ರಿಕ ವಿವರಣೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಕೋವಿಡ್-19 ಸಾಂಕ್ರಾಮಿಕದಿಂದಾಗಿ ಉಂಟಾದ ನಿಧಾನಗತಿಯ ಕಾರಣ ಮಾರ್ಗಸೂಚಿಗಳ ಪ್ರಕಾರ ಸಿಂಧುತ್ವವನ್ನು ನವೀಕರಿಸಲು ಭಾರತೀಯ ತಯಾರಕರು ಹೊಸದಾಗಿ ಮಾದರಿ ಪರೀಕ್ಷೆಯನ್ನು ನಡೆಸುವಲ್ಲಿ ಎದುರಿಸುತ್ತಿರುವ ತೊಂದರೆಗಳ ದೃಷ್ಟಿಯಿಂದ ವಿದ್ಯುತ್ ಉಪಕರಣಗಳು ಮತ್ತು ಸಾಮಾಗ್ರಿಗಳ ಮಾದರಿ ಪರೀಕ್ಷೆಯ ಪ್ರಮಾಣ ಪತ್ರಗಳು ಲಾಕ್‌ಡೌನ್‌ನಿಂದಾಗಿ ಮರು ಮೌಲ್ಯಮಾಪನ ಮಾಡಲು ಸಾಧ್ಯವಾಗಿರಲಿಲ್ಲವೋ, ಅಂತಹ ಸಿಂಧುತ್ವವನ್ನು 30.09.2021 ರವರೆಗೆ ವಿಸ್ತರಿಸಲು ಹೊರಡಿಸಲಾದ CEA ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ದಿನಾಂಕ 02.01.2021 ರಂದು ನಿಗಮದ ಆದೇಶವನ್ನು ಹೊರಡಿಸಲಾಗಿದೆ.

ಪ್ರಸ್ತುತ, ಉಪನಿರ್ದೇಶಕರು ಪವರ್‌ಸಿಸ್ಟಮ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಅಭಿವೃದ್ಧಿ ವಿಭಾಗ ಸಿಇಎ (CEA) ರವರು ದಿನಾಂಕ 17.09.2021ರ ಪತ್ರದಲ್ಲಿ, ಕೋವಿಡ್-19 ಸಾಂಕ್ರಾಮಿಕವು ಮತ್ತೊಮ್ಮೆ ಪುನರುಜ್ಜೀವನಗೊಂಡಿದ್ದರಿಂದ, ಇದು ಉತ್ಪಾದನಾ ಘಟಕಗಳು ಮತ್ತು ಪರೀಕ್ಷಾ ಪ್ರಯೋಗಾಲಯಗಳನ್ನು ಬಲವಂತವಾಗಿ ಮುಚ್ಚಲು ಕಾರಣವಾಗಿದ್ದು, ತಯಾರಕರು ಎದುರಿಸುತ್ತಿರುವ ತೊಂದರೆಗಳನ್ನು ಮತ್ತೊಮ್ಮೆ ಉದಾಹರಿಸಿದ್ದಾರೆ.

ಭಾರತದಲ್ಲಿ ಜಿಐಎಸ್ ಉತ್ಪಾದನೆಯು ತುಂಬಾ ಹಳೆಯ ತಂತ್ರಜ್ಞಾನವಾಗಿರುವುದರಿಂದ ಮತ್ತು ಹೆಚ್ಚಿನ ತಯಾರಕರು ತಮ್ಮ ಪೋಷಕ/ಸಹೋದ್ಯೋಗಿ ತಯಾರಕರ ವಿನ್ಯಾಸ ಮತ್ತು ಪ್ರಕ್ರಿಯೆಯನ್ನು ಅನುಸರಿಸುವುದರಿಂದ ಪೋಷಕ ಕಂಪನಿಯು ತಯಾರಿಸಿದ ಉತ್ಪನ್ನದ ಮೇಲೆ ನಡೆಸಿದ ಮಾದರಿ ಪರೀಕ್ಷಾ ವರದಿಯನ್ನು ಸ್ವೀಕರಿಸಲು ತಯಾರಕರು ವಿನಂತಿಸಿದ್ದಾರೆಂದು ತಿಳಿಸಲಾಗಿದೆ. ಭಾರತೀಯ ತಯಾರಕರು ಎದುರಿಸುತ್ತಿರುವ ಕಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಸಿಇಎ, ಮಾದರಿ ಪರೀಕ್ಷೆ ಪ್ರಮಾಣ ಪತ್ರಗಳ ಮಾನ್ಯತೆಯ ದಿನಾಂಕವನ್ನು 30.09.2022 ರವರೆಗೆ ವಿಸ್ತರಿಸಲು ಮತ್ತು 11.06.2020ರ ಸಿಇಎ ಮಾರ್ಗಸೂಚಿಗಳ ಪ್ಯಾರ 2 (ಜಿ) ಅನ್ನು ತಿದ್ದುಪಡಿ ಮಾಡಲು ನಿರ್ಧರಿಸಿದೆ.

ಇದರನ್ವಯ, 17.09.2021 ದಿನಾಂಕದ ಸಿಇಎ ಪತ್ರದ ಅನುಸಾಗ 23.03.2020 ರಿಂದ ಸಲಕರಣೆಗಳ ಮಾದರಿ ಪರೀಕ್ಷಾ ಪ್ರಮಾಣ ಪತ್ರಗಳ ಮಾನ್ಯತೆಯ ಅವಧಿಯ ಮುಗಿದಿದ್ದರೂ ಸಹ, 30.09.2022 ರವರೆಗೆ ಮಾನ್ಯವೆಂದು ಪರಿಗಣಿಸಲಾಗುತ್ತದೆ. ಇದು, ಕವಿಪ್ರನಿನಿಯ ಸರಬರಾಜುದಾರರು, ಇಪಿಸಿ ಕಾಂಟ್ರಾಕ್ಟ್ ಏಜೆನ್ಸಿಗಳು ಪೂರೈಕೆ ಮಾಡಿದ ಅಥವಾ ಸಲ್ಲಿಸಿದ ಎಲ್ಲಾ ಕವಿಪ್ರನಿನಿ ಟೆಂಡರ್ಸ್/ಪೂರೈಕೆಗಳಿಗೆ ಸ್ವೀಕಾರಾರ್ಹವಾಗಿರುತ್ತದೆ. ಇದಲ್ಲದೆ 11.05.2020 ರ ಸಿಇಎ ಮಾರ್ಗಸೂಚಿಗಳ ಪ್ಯಾರ 2(ಜಿ) ಅನ್ನು ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ. "ಉಪಕರಣಗಳನ್ನು, ಯಾವ ಉತ್ಪಾದನಾ ಘಟಕದಿಂದ ಮಾದರಿಯನ್ನು (Sample Unit) ತಯಾರಿಸಲ್ಪಟ್ಟಿದೆಯೋ ಮತ್ತು ಸಂಬಂಧಿತ ಮಾನದಂಡದ (IS/IEC) ಪ್ರಕಾರ ಯಶಸ್ವಿಯಾಗಿ ಪರೀಕ್ಷೆ ಮಾಡಲಾಗಿದೆಯೋ, ಅದೇ ಉತ್ಪಾದನಾ ಘಟಕದಿಂದ

ಸರಬರಾಜು ಮಾಡತ್ತಕ್ಕದ್ದು. ಆದಾಗ್ಯೂ ಅದೇ ವಿನ್ಯಾಸ ಮತ್ತು ಪ್ರಕ್ರಿಯೆಯನ್ನು ಒದಗಿಸಿದ ಕಂಪನಿ/ಸಹೋದ್ಯಮಿ ಉಪಕರಣವನ್ನು ಭಾರತೀಯ ತಯಾರಕರು ಅನುಸರಿಸುತ್ತಿದ್ದಲ್ಲಿ, ಜಿಐಎಸ್ ಮತ್ತು ಹೈಬ್ರಿಡ್ ಸ್ವಿಚ್‌ಗೇರ್ ಮಾದರಿಯ ಪೋಷಕ ಕಂಪನಿ/ಸಹೋದ್ಯೋಗಿ ತಯಾರಕರ ಪರೀಕ್ಷಾ ವರದಿಯನ್ನು ಸ್ವೀಕರಿಸಬಹುದು".

ಮಾದರಿ ಪರೀಕ್ಷಾ ಪ್ರಮಾಣ ಪತ್ರದ ಸಿಂಧುತ್ವವನ್ನು ವಿಸ್ತರಿಸುವ ಬಗ್ಗೆ ಮತ್ತು ಪೋಷಕ ಕಂಪನಿಯಿಂದ ತಯಾರಿಸಿದ ಉತ್ಪನ್ನದ ಮೇಲೆ ನಡೆಸಿದ ಮಾದರಿ ಪರೀಕ್ಷಾ ವರದಿಯನ್ನು ಸ್ವೀಕರಿಸುವ ಕುರಿತು ಸಿಇಎ ನಿರ್ಧಾರವನ್ನು ಪರಿಗಣಿಸಲು ಕೆಲವು ತಯಾರಕರು ಕವಿಪ್ರನಿನಿಗೆ ವಿನಂತಿರುತ್ತಾರೆ. ತಯಾರಕರ ಮನವಿಯನ್ನು ವಿವರವಾಗಿ ಪರಿಶೀಲಿಸಲಾಗಿ ಮತ್ತು ಕೋವಿಡ್-19 ಸಾಂಕ್ರಾಮಿಕದ ದೃಷ್ಟಿಯಿಂದ ಕವಿಪ್ರನಿನಿಯಲ್ಲಿ ದಿನಾಂಕ 17.09.2021 ರಂದು ಹೊರಡಿಸಲಾಗಿರುವ ಸಿಇಎ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ನಿರ್ಧರಿಸಲಾಗಿರುತ್ತದೆ.

ಆದ್ದರಿಂದ ಈ ಆದೇಶ,

ಆದೇಶ ಸಂಖ್ಯೆ:ಕವಿಪ್ರನಿನಿ/ಬಿ19/345/85-86 ದಿನಾಂಕ:25.10.2021

ಮೇಲಿನ ಸಂದರ್ಭಾನುಸಾರ, 23ನೇ ಮಾರ್ಚ್ 2020 ರಿಂದ ದೇಶದಲ್ಲಿ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಮರುಮೌಲ್ಯಮಾಪನ ಮಾಡಲು ಸಾಧ್ಯವಾಗದ ವಿದ್ಯುತ್ ಉಪಕರಣಗಳು ಮತ್ತು ಸಾಮಾಗ್ರಿಗಳ ಮಾದರಿ ಪರೀಕ್ಷಾ ಪ್ರಮಾಣ ಪತ್ರಗಳ ಮಾನ್ಯತೆಯ ದಿನಾಂಕವನ್ನು ಕೇಂದ್ರ ವಿದ್ಯುತ್ ಪ್ರಾಧಿಕಾರದ ಮಾರ್ಗ ಸೂಚಿಗಳಂತೆ 30.09.2022 ವರೆಗೆ ವಿಸ್ತರಿಸಲು ಅನುಮೋದನೆಯನ್ನು ನೀಡಲಾಗಿದೆ.

ಇದಲ್ಲದೆ ಕೇಂದ್ರ ವಿದ್ಯುತ್ ಪ್ರಾಧಿಕಾರ (ಸಿಇಎ) ಯ "ವಿದ್ಯುತ್ ಪ್ರಸರಣ ವ್ಯವಸ್ಥೆಯಲ್ಲಿನ ಪ್ರಮುಖ ವಿದ್ಯುತ್ ಉಪಕರಣಗಳ ಮೇಲೆ ನಡೆಸಲಾದ ಮಾದರಿ ಪರೀಕ್ಷೆಗಳ ಮಾನ್ಯತೆಯ ಅವಧಿಯ ಮಾರ್ಗಸೂಚಿಗಳು" ಪ್ಯಾರ 2(ಜಿ) ಅನ್ನು ಈ ಕೆಳಕಂಡಂತೆ ಓದುವುದು.

"ಉಪಕರಣಗಳನ್ನು, ಯಾವ ಉತ್ಪಾದನಾ ಘಟಕದಿಂದ ಮಾದರಿಯನ್ನು (Sample Unit) ತಯಾರಿಸಲ್ಪಟ್ಟಿದೆಯೋ ಮತ್ತು ಸಂಬಂಧಿತ ಮಾನದಂಡದ (IS/IEC) ಪ್ರಕಾರ ಯಶಸ್ವಿಯಾಗಿ ಪರೀಕ್ಷೆ ಮಾಡಲಾಗಿದೆಯೋ, ಅದೇ ಉತ್ಪಾದನಾ ಘಟಕದಿಂದ ಸರಬರಾಜು ಮಾಡತ್ತಕ್ಕದ್ದು. ಆದಾಗ್ಯೂ ಅದೇ ವಿನ್ಯಾಸ ಮತ್ತು ಪ್ರಕ್ರಿಯೆಯನ್ನು ಒದಗಿಸಿದ ಕಂಪನಿ/ಸಹೋದ್ಯಮಿ ಉಪಕರಣವನ್ನು ಭಾರತೀಯ ತಯಾರಕರು ಅನುಸರಿಸುತ್ತಿದ್ದಲ್ಲಿ, ಜಿಐಎಸ್ ಮತ್ತು ಹೈಬ್ರಿಡ್ ಸ್ವಿಚ್‌ಗೇರ್ ಮಾದರಿಯ ಪೋಷಕ ಕಂಪನಿ/ಸಹೋದ್ಯೋಗಿ ತಯಾರಕರ ಪರೀಕ್ಷಾ ವರದಿಯನ್ನು ಸ್ವೀಕರಿಸಬಹುದು"

B. R 25/10/21

ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ಕವಿಪ್ರನಿನಿ

ಗೆ,

1) ಎಲ್ಲಾ ಮುಖ್ಯ ಅಭಿಯಂತರರು / ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
2) ಎಲ್ಲಾ ಅಧೀಕ್ಷಕ ಅಭಿಯಂತರರು / ನಿಯಂತ್ರಣಾಧಿಕಾರಿಗಳು,ಕವಿಪ್ರನಿನಿ
3) ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು / ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
4) ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5) ಹಿರಿಯ ಆಪ್ತಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಹಣಕಾಸು) ನಿರ್ದೇಶಕರು (ಪ್ರಸರಣ), ನಿರ್ದೇಶಕರು (ಆ ಮತ್ತು ಮಾಸಂ) ಕವಿಪ್ರನಿನಿ, ಬೆಂಗಳೂರುರವರುಗಳ ಗಮನಕ್ಕೆ ತರಲು.

ಪ್ರತಿಯನ್ನು,

ಅಧೀಕ್ಷಕ ಅಭಿಯಂತರರು(ವಿ) ಮಾಹಿತಿ ತಂತ್ರಜ್ಞಾನ, ಕವಿಪ್ರನಿನಿ ರವರಿಗೆ ಕವಿಪ್ರನಿನಿಯ ಅಂತರ್ಜಾಲದಲ್ಲಿ ಸುತ್ತೋಲೆಯನ್ನು ಅಪ್‌ಲೋಡ್ ಮಾಡುವ ವ್ಯವಸ್ಥೆ ಮಾಡಲು.